**ದಿಃ 15-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ 1 ನೇ ವಾದಿಯಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1: ಸಾಕ್ಷಿಯ ತಂದೆಯ ಮರಣ ಪ್ರಮಾಣ ಪತ್ರ

ನಿಪಿ-2: ಉಪ ತಹತೀಲ್ದಾರರವರು ನೀಡಿರುವ ಪ್ರತ್ಯುತ್ತರ ಪ್ರತಿ

ನಿಪಿ-3 ರಿಂದ ನಿಪಿ-9: ಪಹಣಿ ಪತ್ರಿಕೆಗಳು

ನಿಪಿ-10 ಮತ್ತು ನಿಪಿ-11: ಪ್ರಮಾಣ ಪತ್ರಗಳು

ನಿಪಿ-12: ಒಪ್ಪಂದ ಪತ್ರದ ದೃಡೀಕೃತ ಪ್ರತಿ

ನಿಪಿ-13: ಕೃಷಿ ಪತ್ತಿನ ಸಹಕಾರಿ ಸಂಘದವರು ನೀಡಿರುವ ಪ್ರಮಾಣ ಪತ್ರ

ನಿಪಿ-14 ರಿಂದ ನಿಪಿ-18: ಆರ್ ಸಿ ಪುಸ್ತಕಗಳು

ನಿಪಿ-19 ರಿಂದ ನಿಪಿ-31 : ಆಧಾರ ಕಾರ್ಡಗಳು

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರ ಪರ ಮಾನ್ಯ ಎ ಜಿ ಪಿ ಅವರಿಂದಃ**

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ